**ಓ.ಎಸ್. ನಂಃ 22/2020**

**ಪಿಡಬ್ಲ್ಯೂಃ1**

**ದಿನಾಂಕಃ 04.09.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀಮತಿ ಡಿ.ಎಸ್.ಎಮ್ ವಕೀಲರಿಂದಃ**

10. ದಾವಾ ಆಸ್ತಿಯು ನನ್ನ ತಂದೆಯವರು ಖರೀದಿ ಮಾಡಿದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯು ನನ್ನ ತಂದೆಯವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯನ್ನು ನನ್ನ ತಂದೆಯವರು ದಿಃ 21.08.1968 ರಂದು ಗುರುಸಿದ್ದಯ್ಯರವರಿಂದ ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

11. ದಾವಾ ಆಸ್ತಿಯಲ್ಲಿ 2 ಭಾಗಗಳಿದ್ದು, ದಾವಾ ಆಸ್ತಿಯ ಒಂದು ಭಾಗದಲ್ಲಿ ನಾನು ವಾಸಿಸುತ್ತಿದ್ದೇನೆ ಹಾಗೂ ಇನ್ನೊಂದು ಭಾಗದಲ್ಲಿ 1 ನೇ ಪ್ರತಿವಾದಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಸದರಿ ಎರಡು ಭಾಗಗಳ ಮದ್ಯೆ ಒಂದು ಗೋಡೆ ಇದೆ ಎಂದರೆ ಸರಿ. ನನಗೆ ಒಟ್ಟು 3 ಜನ ಮಕ್ಕಳಿರುತ್ತಾರೆ. ನನ್ನ 2 ಜನ ಹೆಣ್ಣು ಮಕ್ಕಳಿಗೆ ಮದುವೆ ಮಾಡಿಕೊಟ್ಟಿದ್ದು ನನ್ನ ಗಂಡು ಮಗ ಕೂಲಿ ಮಾಡಿಕೊಂಡು ಇರುತ್ತಾರೆ. ನಾನು ಮತ್ತು ನನ್ನ ಹೆಂಡತಿ ದಾವಾ ಆಸ್ತಿಯಲ್ಲಿ ವಾಸವಿದ್ದೇವೆ. ನಾನು ಮತ್ತು ನನ್ನ ಹೆಂಡತಿ ಕೂಲಿ ಮಾಡಿಕೊಂಡು ಹಾಸನದಲ್ಲಿ ವಾಸವಿರುತ್ತೇವೆ ಎಂದರೆ ಸರಿಯಲ್ಲ.

12. ದಾವಾ ಆಸ್ತಿಯನ್ನು ನನ್ನ ತಂದೆಯವರು 1 ನೇ ಪ್ರತಿವಾದಿ ದಾನಪತ್ರದ ಮೂಲಕ ದಾನವಾಗಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿದ್ದು, ಅದನ್ನು ನಿಪಿ.3 ರ ದಾನಪತ್ರದ ಮೂಲಕ 1 ನೇ ಪ್ರತಿವಾದಿಗೆ ದಾನವಾಗಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.3 ರ ದಾಖಲೆಯನ್ನು ನಾನು ನೊಂದಣಾಧಿಕಾರಿಗಳ ಕಚೇರಿಯಿಂದ ಪಡೆದಿರುತ್ತೇನೆ. ನಿಪಿ.3 ರ ದಾಖಲೆ ಆದ 15 ದಿನಗಳ ನಂತರದಲ್ಲಿ ನಾನು ಸದರಿ ದಾಖಲೆಯನ್ನು ನೊಂದಣಾಧಿಕಾರಿಗಳ ಕಚೇರಿಯಿಂದ ಪಡೆದಿರುತ್ತೇನೆ. ನಿಪಿ.3 ರ ದಾಖಲೆಯನ್ನು ನೀವು ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೀರಾ ಎಂದು

ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ನಿಪಿ.3 ರ ದಾಖಲೆಯನ್ನು ನಾನು ಪಡೆಯುವಾಗ ನನ್ನ ತಂದೆಯವರು ಜೀವಂತವಿದ್ದರು.

13. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿದ್ದು, ಅದನ್ನು ದಾನವಾಗಿ ಕೊಟ್ಟದ್ದು ತಪ್ಪಾಗಿರುತ್ತದೆ ಎಂದು ನಾನು ನನ್ನ ತಂದೆಯವರಲ್ಲಿ ಪ್ರಶ್ನಿಸಿರುವುದಿಲ್ಲ. ನಿಪಿ.3 ರ ದಾನಪತ್ರದ ಆಧಾರದ ಮೇಲೆ ದಾವಾ ಆಸ್ತಿಯನ್ನು ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡುವಂತೆ 1 ನೇ ಪ್ರತಿವಾದಿ ಅರ್ಜಿಯನ್ನು ಸಲ್ಲಿಸಿದಾಗ ನಿವೇನಾದರೂ ತಕರಾರು ಮಾಡಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ದಾವಾ ಆಸ್ತಿಯ ಖಾತೆ ಯಾರ ಹೆಸರಿನಲ್ಲಿದೆ ಎಂದು ಸೂಚಿಸಿದ ಪ್ರಶ್ನೆಗೆ ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

14. ನಿಮ್ಮ ಹೆಸರಿನಲ್ಲಿ ಒಂದು ಖಾಲಿ ಸೈಟು ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ನನ್ನ ಖಾಲಿ ಸೈಟಿನಲ್ಲಿ ಮನೆ ಕಟ್ಟುವವರೆಗೂ ದಾವಾ ಆಸ್ತಿಯಲ್ಲಿ ಇರಲು 1 ನೇ ಪ್ರತಿವಾದಿ ನನಗೆ ಅನುಮತಿಯನ್ನು ನೀಡಿದ್ದರು ಎಂದರೆ ನನಗೆ ಅನುಮತಿಯನ್ನು ನೀಡಲು ಅವಳು ಯಾರು ಎಂದು ಸಾಕ್ಷಿಯು ಉತ್ತರಿಸಿರುತ್ತಾರೆ. ದಾವಾ ಆಸ್ತಿಯಲ್ಲಿ ಇರುವಂತೆ ನನ್ನ ತಂದೆಯವರು ನನಗೆ ಅನುಮತಿ ನೀಡಿದ್ದರು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಖಾಲಿ ಸೈಟಿನಲ್ಲಿ ಮನೆ ನಿರ್ಮಾಣ ಮಾಡಲು ಸರ್ಕಾರದವರು ನನಗೆ ಧನ ಸಹಾಯ ನೀಡಿದ್ದರೂ ಸಹ ನಾನು ಬೇರೆ ಮನೆಯನ್ನು ಕಟ್ಟದೆ 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವಾ ಮನೆಯಲ್ಲಿಯೇ ಉಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

15. ಸರಕಾರದಿಂದ ಬಂದ ಧನ ಸಹಾಯದಿಂದ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ದುರಸ್ಥಿ ಪಡಿಸಿರುತ್ತಾರೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ವಾಸವಿರುವ ಭಾಗಕ್ಕೆ ದುರಸ್ಥಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸರಕಾರದವರು ಇಡೀ ದಾವಾ ಮನೆಯನ್ನು ದುರಸ್ಥಿಗೊಳಿಸಲು ಅನುದಾನವನ್ನು ನೀಡಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗೆ ಒಂದೇ ಮನೆ ನಂಬರ್ ಇರುತ್ತದೆ ಎಂದರೆ ಸರಿಯಲ್ಲ. ನಾನು ವಾಸ ಮಾಡುತ್ತಿರುವ ದಾವಾ ಆಸ್ತಿಯ ಮನೆ ನಂಬರ್ 139 ಅಂತ ಇದ್ದು, 1 ನೇ ಪ್ರತಿವಾದಿ ವಾಸ ಮಾಡುತ್ತಿರುವ ಭಾಗದ ಮನೆಯ ನಂಬರ್ ನನಗೆ ಗೊತ್ತಿಲ್ಲ. ಇಡೀ ದಾವಾ ಆಸ್ತಿಯ ಮನೆಗೆ 139 ಅಂತ ಒಂದೇ ನಂಬರ್ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ1 ನೇ ಪ್ರತಿವಾದಿ

ಮತ್ತು ನಾನು ವಾಸ ಮಾಡುತ್ತಿರುವ ಭಾಗದ ಮನೆಗಳಿಗೆ ಬೇರೆ ಬೇರೆ ನಂಬರ್ ಇದೆ ಎಂದು ತೋರಿಸಲು ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. 1 ನೇ ಪ್ರತಿವಾದಿ ವಾಸವಿರುವ ಭಾಗದ ಮನೆಯ ನಂಬರ್ ನ್ನು ನಾನು ವಾದಪತ್ರದಲ್ಲಿ ಹೇಳಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ.

16. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಾನು 2 ನೇ ಪ್ರತಿವಾದಿಗೆ ಈ ದಾವೆಯ ಬಗ್ಗೆ ನೋಟಿಸನ್ನು ನೀಡಿರುತ್ತೇನೆ. ನಾನು 2 ನೇ ಪ್ರತಿವಾದಿಗೆ ನೋಟಿಸು ಕೊಟ್ಟ ಬಗ್ಗೆ ನೋಟಿಸಿನ ಪ್ರತಿ ಅಥವಾ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸಂಬಂದ ನನ್ನ ಮತ್ತು 1 ನೇ ಪ್ರತಿವಾದಿಯ ಮಧ್ಯೆ ಜಗಳವಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖಾಲಿ ಮಾಡಿ ಹೋಗುವಂತ 1 ನೇ ಪ್ರತಿವಾದಿ ನನಗೆ ಹೇಳಿ ತೊಂದರೆ ನೀಡುತ್ತಿದ್ದರು. ದಾವಾ ಆಸ್ತಿಯ ಸಂಬಂದ ನಾನು 1 ನೇ ಪ್ರತಿವಾದಿಯ ವಿರುದ್ಧ ಹಲವಾರು ಬಾರಿ ಪೋಲಿಸ್ ಠಾಣೆಗೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

17. ದಾವಾ ಆಸ್ತಿಯನ್ನು ಖಾಲಿ ಮಾಡಿ ಹೋಗುವಂತೆ 1 ನೇ ಪ್ರತಿವಾದಿ ಹಲವಾರು ಬಾರಿ ನನ್ನಲ್ಲಿ ಕೇಳಿದ್ದರು ಎಂದರೆ ಸಾಕ್ಷಿಯು ನನ್ನ ತಂದೆಯವರು ಮರಣದ ನಂತರ 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಖಾಲಿ ಮಾಡಿ ಹೋಗುವಂತೆ ನನ್ನಲ್ಲಿ ಹೇಳಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ದಾವಾ ಆಸ್ತಿಯ ಸ್ವಾಧೀನವನ್ನು ಬಿಟ್ಟುಕೊಡುವಂತೆ 1 ನೇ ಪ್ರತಿವಾದಿ ನನ್ನಲ್ಲಿ ಕೇಳಿದ್ದರು ಸಹ ನಾನು ದುರುದ್ದೇಶದಿಂದ ದಾವಾ ಆಸ್ತಿಯಲ್ಲಿ ಉಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯು ನನಗೆ ಇರಲು ಅನುಮತಿ ಕೊಟ್ಟಿದ್ದು, ಅದನ್ನು ದುರುಪಯೋಗಪಡಿಸಿಕೊಂಡು ನಾನು ದಾವಾ ಆಸ್ತಿಯಲ್ಲಿಯೇ ಉಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

18. ದಾವಾ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ಗೊತ್ತಿದ್ದರೂ ಸಹ ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.3 ರ ದಾಖಲೆಯು ನನ್ನ ತಂದೆಯವರು 1 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎನ್ನುವ ವಿಷಯ ನನಗೆ ಗೊತ್ತಿದ್ದ ಕಾರಣ ಇಲ್ಲಿಯವರೆಗೂ ಸದರಿ ದಾಖಲಯನ್ನು ನಾನು ಎಲ್ಲಿಯೂ ಸಹ ಪ್ರಶ್ನಿಸಿರುವುದಿಲ್ಲ ಎಂದರೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

ದಾವಾ ಆಸ್ತಿಯ ಸ್ವಾಧೀನವನ್ನು ಬಿಟ್ಟುಕೊಡುವಂತೆ 1 ನೇ ಪ್ರತಿವಾದಿಯು ನಮ್ಮಲ್ಲಿ ಕೇಳಿದ ಕಾರಣ ನಾನು ಮತ್ತು ನನ್ನ ಮಕ್ಕಳು ಸೇರಿ 1 ನೇ ಪ್ರತಿವಾದಿಗೆ ವಿನಾಕಾರಣ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಹೂಡುವ ಪೂರ್ವದಲ್ಲಿ 2 ನೇ ಪ್ರತಿವಾದಿಗೆ ಯಾವುದೇ ನೋಟಿಸನ್ನು ನೀಡದಿದ್ದ ಕಾರಣ ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಹೂಡುವ ಪೂರ್ವದಲ್ಲಿ 2 ನೇ ಪ್ರತಿವಾದಿಗೆ ಯಾವುದೇ ನೋಟಿಸನ್ನು ನೀಡದಿರುವ ಕಾರಣ ಈ ದಾವೆಯು ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೇ ದಾವಾ ಆಸ್ತಿಯ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ನೀವು ಕಾನೂನು ಬಾಹಿರವಾಗಿ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ.

**ಮರುವಿಚಾರಣೆ ಇರುವುದಿಲ್ಲ**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಧೀಶರು ಕೆ.ಆರ್.ನಗರ**